ಕೆ.ಆರ್.ಪುರ ಹೋಬಳಿಯಲ್ಲಿನ ಭೂ ಕಬಳಿಕೆ ಆರೋಪ

ಸಚಿವ ಬೈರತಿ ಬಸವರಾಜು ವಿರುದ್ಧದ ವಿಚಾರಣೆ ತಡೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಬೈರತಿ ಬಸವರಾಜ್ ಮತ್ತು ಶಾಸಕ ಆರ್.ಶಂಕರ್ ವಿರುದ್ಧ ಅಧೀನ ನ್ಯಾಯಾಲಯದ ವಿಚಾರಣೆಗೆ ನೀಡಿದ್ದ ಮಧ್ಯಂತರ ತಡೆಯನ್ನು ಹೈಕೋರ್ಟ್ ಫೆಬ್ರುವರಿ ಎರಡನೇ ವಾರದವರೆಗೂ ವಿಸ್ತರಿಸಿದೆ.

'ಅಧೀನ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಸಚಿವ ಬೈರತಿ ಬಸವರಾಜ್, ಶಾಸಕ ಆರ್.ಶಂಕರ್ ಮತ್ತು ಎ.ಎಂ. ಮಾದಪ್ಪ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಮೇಲ್ಮನವಿ ವಿಚಾರಣೆ ನಡೆಸಿ ಈ ಮೊದಲು ಮಧ್ಯಂತರ ತಡೆ ನೀಡಿತ್ತೆಂದು. ಮಂಗಳವಾರ ಪುನಃ ವಿಚಾರಣೆ ನಡೆಸಿದ ನ್ಯಾಯಪೀಠ ಫೆಬ್ರುವರಿ ಎರಡನೇ ವಾರಕ್ಕೆ ಮುಂದೂಡಿತು ತಡೆ ವಿಸ್ತರಿಸಿ ಆದೇಶಿಸಿತು.

ಪ್ರಕರಣ ಏನು?: 'ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ಕಲ್ಕೆರೆ ಗ್ರಾಮದ ಸರ್ವೇ ನಂಬರ್ 375/2ರಲ್ಲಿನ 22.43 ಎಕರೆ ಅದೂರ್ ಅಣ್ಣಿಯಪ್ಪ ಎಂಬುವವರಿಗೆ ಸೇರಿದ್ದು, 2003ರ ಮೇ 21ರಂದು ಸಂಬಂಧಿಕರಾದ ಮಾದಪ್ಪ ಮತ್ತು ಪಿಳ್ಳಮಾದಪ್ಪ ಖಾಲಿ ಹಾಳೆಗಳ ಮೇಲೆ ಅದೂರ್ ಅಣ್ಣಿಯಪ್ಪ ಅವರ ಸಹಿ ಮತ್ತು ಹೆಬ್ಬೆಟ್ಟು ಗುರುತು ಪಡೆದುಕೊಂಡರು. ನಂತರ ಪಾಲುದಾರಿಕೆ ಕರಾರು ಸಿದ್ಧಪಡಿಸಿಕೊಂಡರು' ಎಂಬುದು ಆರೋಪ.

'ಈ 22.43 ಎಕರೆಯನ್ನು ಬೈರತಿ ಬಸವರಾಜ್ ಅವರಿಗೆ 2003ರ ಮೇ 21ರಂದು ಅಕ್ರಮವಾಗಿ ಮಾರಾಟ ಮಾಡಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಡಲಾಗಿದೆ' ಎಂದು ಆರೋಪಿಸಿ ಅಣ್ಣಿಯಪ್ಪ ಪುತ್ರ ಮಾದಪ್ಪ ಖಾಸಗಿ ದೂರು ದಾಖಲಿಸಿದ್ದರು.

ನಗರದ 42ನೇ ಎಸಿಎಂಎಂ ನ್ಯಾಯಾಲಯ ಪ್ರಕರಣವನ್ನು ವಿಚಾರಣೆಗೆ ಅಂಗೀಕರಿಸಿ 2021ರ ನವೆಂಬರ್ 5ರಂದು ಬೈರತಿ ಬಸವರಾಜ್, ಆರ್.ಶಂಕರ್, ಮಾದಪ್ಪ ಮತ್ತು ಪಿಳ್ಳಮಾದಪ್ಪ ಅವರಿಗೆ ಸಮನ್ಸ್ ಜಾರಿ ಮಾಡಿತ್ತು.

ಬಲಿಜ ಸಂಘದ ಸದಸ್ಯತ್ವಕ್ಕಾಗಿ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ರಾಜ್ಯ ಬಲಿಜ ಸಂಘದಲ್ಲಿ ಸದಸ್ಯತ್ವ ನೋಂದಣಿ ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಬಲಿಜ ಸಮುದಾಯದ ಮುಖಂಡರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಚಾಮರಾಜಪೇಟೆಯಲ್ಲಿನ ಸಂಘದ ಕಚೇರಿ ಎದುರು ಧರಣಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. 'ಮಾರ್ಚ್‌ನಲ್ಲಿ ಸಂಘಕ್ಕೆ ಚುನಾವಣೆ ನಡೆಯಲಿದೆ. ಈಗಲೇ ಸದಸ್ಯತ್ವ ನೋಂದಣಿ ನಿಲ್ಲಿಸಲಾಗಿದೆ. ಸಂಘದ ಹಾಲಿ ಪದಾಧಿಕಾರಿಗಳು ತಮ್ಮ ಆಪ್ತರಿಗೆ ಮಾತ್ರ ಸದಸ್ಯತ್ವ ನೀಡಿದ್ದಾರೆ' ಎಂದು ಆರೋಪಿಸಿದರು.

ರಾಜ್ಯದಲ್ಲಿ ಬಲಿಜ ಸಮಾಜದ 50 ಲಕ್ಷ ಜನಸಂಖ್ಯೆ ಇದೆ. ಆದರೆ, 12 ಸಾವಿರ ಮಾತ್ರ ಸದಸ್ಯರನ್ನು ಸಂಘ ಹೊಂದಿದೆ. ಸದಸ್ಯತ್ವ ನೋಂದಣಿ ಮಾಡಬಹುದೆಂದು ಸರ್ಕಾರ ಸಂಘಗಳ ಅಭಿಪ್ರಾಯಕ್ಕೆ ತಿಳಿದಿದ್ದೂ, ಸದಸ್ಯತ್ವ ಸ್ವೀಕರಿಸುತ್ತಿಲ್ಲ ಎಂದು ಸಮಾಜದ ಮುಖಂಡ ಮುನಿರಾಜು ದೂರಿದರು.

ಬಲಿಜ ಸಂಘದ ಕಚೇರಿ ಎದುರು ಪ್ರತಿಭಟನೆ ನಡೆಸಿದ ಸಮುದಾಯದ ಮುಖಂಡರು —ಪ್ರಜಾವಾಣಿ ಚಿತ್ರ

'ಚುನಾವಣೆಗೆ ಇನ್ನೂ ಎರಡು ತಿಂಗಳು ಬಾಕಿ ಇದೆ. ಈ ಹಿಂದೆ ಸದಸ್ಯತ್ವ ನೋಂದಣಿ ಮತ್ತು ಕೊನೆಯ ದಿನಾಂಕದ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ಈಗ ಸದಸ್ಯತ್ವ ನೀಡುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'2021ರ ಸೆ.30ರ ತನಕ ಸದಸ್ಯತ್ವ ನೋಂದಣಿಗೆ ಅವಕಾಶ ನೀಡಿಲಾಗಿತ್ತು, ಈ ಬಗ್ಗೆ ಪ್ರಚಾರವನ್ನೂ ಮಾಡಲಾಗಿತ್ತು. ಆ ದಿನಾಂಕದೊಳಗೆ ಅರ್ಜಿ ಸಲ್ಲಿಸಿದ್ದವರಿಗೆ ಸದಸ್ಯತ್ವ ನೀಡಲಾಗಿದೆ. ಚುನಾವಣೆ ನಡೆಸುವಂತೆ ಡಿಸೆಂಬರ್‌ನಲ್ಲಿ ಜಿಲ್ಲಾ ನೋಂದಣಾಧಿಕಾರಿ ಹಾಗೂ ಸಹಕಾರ ಸಂಘದ ಉಪನಿಬಂಧಕರಿಗೆ ಪತ್ರ ಬರೆಯಲಾಗಿದೆ. ಸಂಘದ ನಿಯಮದ ಪ್ರಕಾರ ಈಗ ಸದಸ್ಯತ್ವ ನೀಡಲು ಆಗುವುದಿಲ್ಲ' ಎಂದು ಸಂಘದ ಅಧಿಕಾರಿಗಳು ಸ್ಪಷ್ಟಪಡಿಸಿದರು.

ಐಪಿಎಸ್ ಶ್ರೇಣಿಯವರಲ್ಲದ ಅಧಿಕಾರಿಗಳಿಗೆ ಬಡ್ತಿಯಲ್ಲಿ ಅನ್ಯಾಯ: ಸರ್ಕಾರಕ್ಕೆ ಪತ್ರ

ಬೆಂಗಳೂರು: 'ಬಡ್ತಿ ನೀಡುವ ವಿಚಾರದಲ್ಲಿ ಐಪಿಎಸ್ ಶ್ರೇಣಿಯವರಲ್ಲದ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ' ಎಂದು ಆರೋಪಿಸಿ ರಾಜ್ಯ ಪೊಲೀಸ್ ಸಂಘದ ಪದಾಧಿಕಾರಿಗಳು, ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

'ನಾನ್ ಐಪಿಎಸ್ ಅಧಿಕಾರಿಗಳಿಗೆ ಆಗುತ್ತಿರುವ ಅನ್ಯಾಯವನ್ನು 15 ದಿನದೊಳಗೆ ಸರಿಪಡಿಸಬೇಕು' ಎಂದು ಸಂಘದ ಅಧ್ಯಕ್ಷ ಎಂ. ಯೋಗೇಶ್ ಒತ್ತಾಯಿಸಿದ್ದಾರೆ.

'ರಾಜ್ಯದಲ್ಲಿ 57 ಐಪಿಎಸ್ ಹಾಗೂ 109 ಐಪಿಎಸ್ ಶ್ರೇಣಿಯವರಲ್ಲದವರಿಗೆ ಮೀಸಲಾದ ಹುದ್ದೆಗಳು ಮಂಜೂರಾಗಿವೆ. ಈ ಹುದ್ದೆಗಳಿಗೆ ಬಡ್ತಿ ನೀಡುವ ಸಂದರ್ಭದಲ್ಲಿ, ಐಪಿಎಸ್‌ಗಳಿಗೆ ಮೀಸಲಿರುವ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ. ಇದರಿಂದ ಸ್ಥಳೀಯ ಕನ್ನಡಿಗರಾದ ಐಪಿಎಸ್ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ' ಎಂದೂ ಪತ್ರದಲ್ಲಿ ದೂರಿದ್ದಾರೆ.

'ಐಪಿಎಸ್ ಶ್ರೇಣಿಯವರಲ್ಲದ ಅಧಿಕಾರಿಗಳು ಇದ್ದರೂ, ಅವರಿಗಾಗಿ ಇರುವ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ನೇಮಿಸುವುದು ಸರಿಯಲ್ಲ. ಇಂಥ ಹುದ್ದೆಗಳಲ್ಲಿರುವ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ಆ ಹುದ್ದೆಗಳಿಗೆ ಐಪಿಎಸ್ ಶ್ರೇಣಿಯವರಲ್ಲದ ಅಧಿಕಾರಿಗಳನ್ನು ಭರ್ತಿ ಮಾಡಬೇಕು' ಎಂದೂ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಗೂ ಪತ್ರದ ಪ್ರತಿ ಕಳುಹಿಸಲಾಗಿದೆ.

'ಸಿದ್ದರಾಮಯ್ಯ ಆಗಾಗ್ಗೆ ಕರೆ ಮಾಡುತ್ತಾರೆ'

ಬೆಂಗಳೂರು: 'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬಹಳ ಸಲ ದೂರವಾಣಿ ಕರೆ ಮಾಡಿದ್ದಾರೆ. ಅವರ ಅಂತರಾಳದಲ್ಲಿ ಏನಿದೆಯೊ ನನಗಂತೂ ಗೊತ್ತಿಲ್ಲ' ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜು ಹೇಳಿದ್ದಾರೆ.

'ಅವರು ಆಗಿಂದಾಗ್ಗೆ ಫೋನ್ ಮಾಡುತ್ತಾರೆ. ಸೋಮವಾರವೂ ಬಾದಾಮಿಯಿಂದ ಕರೆ ಮಾಡಿದ್ದರು. ದೇವರ ಮೇಲೆ ಸತ್ಯ ಮಾಡಿ ಹೇಳುತ್ತೇನೆ ಅವರು ರಾಜಕೀಯವಾಗಿ ಒಂದು ಸಲವೂ ಮಾತನಾಡಿಲ್ಲ' ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ನನ್ನ ಬಳಿ ಯಾರೂ ಕೂಡ ಪಕ್ಷ ಬಿಡುವ ವಿಚಾರ ಹೇಳಿಲ್ಲ. ನಾನು ಹೋಗುವುದಾದರೆ ರಾಜಕೀಯ ಬಿಟ್ಟು ಮನೆಗೆ ಹೋಗುತ್ತೇನೆಯೇ ಹೊರತು ಬೇರೆ ಪಕ್ಷಕ್ಕೆ ಹೋಗುವುದಿಲ್ಲ. ಪ್ರತಿ ಚುನಾವಣೆಗೂ ಪಕ್ಷ ಬದಲು ಮಾಡಲು ಆಗುವುದಿಲ್ಲ. ಜನಸೇವೆ ಮಾಡುವುದಕ್ಕೆ ಬಂದಿದ್ದೇನೆ ಹೊರತು ಅಧಿಕಾರಕ್ಕಲ್ಲ. ನಾನು ಯಾವುದಕ್ಕೂ ಆಸೆ ಪಡುವವನಲ್ಲ' ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸಕೋಟೆ
ಟಿಸಿ ಬಾಯಿಗೆ ಹೆಸರು ಅಳವಡಿಸಿರುವ ವಿಳಾಸ: ಕೃಷಿ ಉತ್ಪನ್ನ ಮಾರುಕಟ್ಟೆ-562114
ದೂರವಾಣಿ ಸಂಖ್ಯೆ: 08277-222 ಇ-ಮೇಲ್: [illegible]
ಪತ್ರ ಸಂಖ್ಯೆ: ಕೃಮಾಮಾ/ಟೆಂ/ಕೃಷಿ/2021-22 ದಿನಾಂಕ: 21.01.2022

ತೆರವುಗೊಳಿಸಿದ ಟೆಂಡರ್

ದಿನಾಂಕ: 23.01.2022 ರಂದು ಇದೇ ದಿನಪತ್ರಿಕೆಯಲ್ಲಿ ಪ್ರಕಟಿಸಿದ ಇ-ಟೆಂಡರ್ ಪ್ರಕಟಣೆಯಲ್ಲಿ ಟೆಂಡರ್‌ನ ಮೊತ್ತ ರೂ. 15.00 ಎಂದು ತಪ್ಪಾಗಿ ಮುದ್ರಣಗೊಂಡಿದೆ ಇದನ್ನು ಟೆಂಡರ್‌ನ ಮೊತ್ತ : ರೂ.15,00,000/- ಎಂದು ಓದಿಕೊಳ್ಳತಕ್ಕದು. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/- ಕಾರ್ಯದರ್ಶಿ ಕೃಮಾಮಾಸ, ಹೊಸಕೋಟೆ
ಸಹಿ/-ಆಡಳಿತಾಧಿಕಾರಿಗಳು ಕೃಮಾಮಾಸ, ಹೊಸಕೋಟೆ

ಮಿಡುಳು ಆರೋಗ್ಯ ಕಾರ್ಯಕ್ರಮಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ನೀತಿ ಆಯೋಗ ಹಾಗೂ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿರುವ 'ಕರ್ನಾಟಕ ಮಿಡುಳು ಆರೋಗ್ಯ ಕಾರ್ಯಕ್ರಮ'ಕ್ಕೆ ಮಂಗಳವಾರ ಚಾಲನೆ ದೊರೆಯಿತು.

ಬೆಂಗಳೂರು, ಕೊಲಾರ, ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಪ್ರಾಯೋಗಿಕವಾಗಿ ಜಾರಿ ಮಾಡಲಾಗುತ್ತಿದೆ. ಮಾನಸಿಕ ರೋಗಗಳ ತಪಾಸಣೆ ಹಾಗೂ ಚಿಕಿತ್ಸೆ ನೀಡುವ ಬಗ್ಗೆ ವೈದ್ಯರಿಗೆ ಈ ಕಾರ್ಯಕ್ರಮದಡಿ ತರಬೇತಿ ನೀಡಲಾಗುತ್ತದೆ. ರೋಗಿಗಳನ್ನು ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲಾಗುತ್ತದೆ.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ಕೋವಿಡ್ ಕಾಣಿಸಿಕೊಂಡ ಬಳಿಕ ಜನರಲ್ಲಿ ಕಾಣಿಸಿಕೊಂಡ ಮಾನಸಿಕ ಸಮಸ್ಯೆಗಳಿಗೆ ನಿಮ್ಹಾನ್ಸ್ ಸಂಸ್ಥೆಯ ನೆರವಿನಿಂದ ಆಪ್ತ ಸಮಾಲೋಚನೆ ಸೇವೆ ನೀಡಲಾಯಿತು. ಇದನ್ನು ಇನ್ನಷ್ಟು ಮುಂದುವರಿಸಲಾಗುತ್ತಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಸುಮಾರು 2 ಲಕ್ಷ ಮಂದಿ ವೈದ್ಯ ಶಿಕ್ಷಣ ಪಡೆಯುತ್ತಿದ್ದಾರೆ. ಇವರನ್ನು ಬಳಸಿಕೊಂಡು ಮಾನಸಿಕ ಅನಾರೋಗ್ಯಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಈ ಪ್ರಾಯೋಗಿಕ ಕಾರ್ಯಕ್ರಮವನ್ನು ಉತ್ತಮವಾಗಿ ಜಾರಿ ಮಾಡಿ, ಸರ್ಕಾರಕ್ಕೆ ವರದಿ ನೀಡಬೇಕು. ನಂತರ ಮುಂದಿನ ಬಜೆಟ್‌ನಲ್ಲಿ ಹೆಚ್ಚು ಅನುದಾನ ಮೀಸಲಿಡಬಹುದು' ಎಂದರು.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ – 560095, ಭಾರತ
ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001
corporateaffairs@teamlease.com, www.teamleasegroup.com

31ನೇ ಡಿಸೆಂಬರ್ 2021ಕ್ಕೆ ಕೊನೆಯಾದ ತ್ರೈಮಾಸಿಕಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಕೆಲಸ ತಕರಾರು ದಕ್ಷತೆಯನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಕೊನೆಗೊಳ್ಳುವ		ವರ್ಷಕ್ಕೆ	
	31.12.2021ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 31.12.2020ಕ್ಕೆ	31.12.2021ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 31.12.2020ಕ್ಕೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	176,717.94	128,527.25	153,219.44	118,083.24
ಸರಿಯ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆ ಮುನ್ನ ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	3,194.77	2,459.16	2,498.56	2,414.63
ಸರಿಯ ಅವಧಿಗೆ ತೆರಿಗೆಗೆ ಮುನ್ನ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	3,024.57	2,912.04	2,491.60	2,193.98
ಸರಿಯ ಅವಧಿಗೆ ಒಟ್ಟು ಸಮಗ್ರವಾದ ಆದಾಯ (ಸರಿಯ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು))	3,023.35	2,321.33	2,501.77	2,192.84
ಪೇಯಿಸ್ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಹೊರತುಪಡಿಸಿ) ಲೆಕ್ಕ ಪತ್ರದ ಬ್ಯಾಲೆನ್ಸ್ ಷೀಟ್ ಪ್ರಕಾರ	63,492.89	55,499.15	63,728.97	55,169.95
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕಕರಣಗೊಂಡಿಲ್ಲ)				
(ಎ) ಮೂಲ (ರೂ.)	17.53	13.38	14.57	12.83
(ಬಿ) ಡೈಲ್ಯೂಟೆಡ್ (ರೂ.)	17.53	13.38	14.57	12.83

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜನಲ್ಲಿ ದಾಖಲಾಗಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಗಳು, 2015ರ ("ಲಿಸ್ಟಿಂಗ್ ನಿಯಮಗಳು") ನಿಯಮಗಳ 33ರ ಅಡಿಯಲ್ಲಿ ಪ್ರಕಟವಾಗಿದೆ. 31ನೇ ಡಿಸೆಂಬರ್, 2021ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಂಪೂರ್ಣ ನಮೂನೆಯನ್ನು ಮತ್ತು ಕೊರೊನಾಕ್ಕೆ ಆರ್ಥಿಕ ಫಲಿತಾಂಶಗಳ ಸಂಪೂರ್ಣ ನಮೂನೆ ದೊರಕುವ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (www.teamleasegroup.com) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಗಳು, 2015ರ ನಿಯಮ 33ರ ಪ್ರಕಾರ ಕಂಪನಿಯ ಮೇಲೆ ಹೇಳಲಾದ 31ನೇ ಡಿಸೆಂಬರ್, 2021ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ಪರಿಶೀಲಿಸಿ ಸಮ್ಮತಿಸಿದೆ. ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಳಿಯು ದಿನಾಂಕ ಜನವರಿ, 2022ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿದ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿರ್ದೇಶಕರಿಂದ ಅಥವಾ ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ (IND-AS) ನಲ್ಲಿ ವಿಧಿಸಿದಂತೆ ರೆಕಗ್ನಿಷನ್ ಮತ್ತು ಮೆಜರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ದಿನಾಂಕ: 25ನೇ ಜನವರಿ, 2022
ಸ್ಥಳ: ಬೆಂಗಳೂರು

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಳಿಯಲ್ಲಿ, ಮತ್ತು ಅದರ ಪರವಾಗಿ
ಸಹಿ/-
ಅನೂಪ್ ಕುಮಾರ್ ಗೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ಅಶೋಕನಗರ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ
ನಂ. 1380/ಎ, 6ನೇ ಅಡ್ಡರಸ್ತೆ, ಅಶೋಕನಗರ, ಬಸವನಗುಡಿ 1ನೇ ಹಂತ, 2ನೇ ಘಟ್ಟ, ಬೆಂಗಳೂರು-560 050. ಫೋನ್: 080-26506123, 26606365, ಮೊಬೈಲ್: 99642 16663
ಅನುಬಂಧ-4
ಪ್ರಕ್ರಿಯಾ ಹಿಸಾತಿಕ್ಕೆ (ಜಾಪ) ನಿಯಮಗಳು 2002 ನಿಯಮ-8(1)

ಸ್ವಾಧೀನದ ನೋಟೀಸ್
(ಸ್ಥಿರಾಸ್ತಿಗಳ)

ಕೆಳಗಿನವರು ಅಶೋಕನಗರ ಕೋ-ಆಪ್ ಬ್ಯಾಂಕ್ ಲಿ., ಇದರ ಅಧಿಕೃತ ಹೆಸರಿನ ಪ್ರಕಾರ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್2002ರ ಆಕ್ಟಿಯ ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ವಿಧಿಯಮಗಳ 2002 ರಿಯಮ 9ನಿಯ ಓದಿಕೊಂಡಂತೆ ಪ್ರಕರಣ 13(12)ರ ಆಕ್ಟಿಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ದಿನಾಂಕ: ನೋಟೀಸನ್ನು ಕಳಿಸಲಾದ ನಾಲಾಂಶದಿಗೆ ತಮ್ಮ ಸಾಲದ ಮೊತ್ತಗಳನ್ನು ದಿನಾಂಕ: ನೋಟೀಸಿನಲ್ಲಿನ್ನು ಸೂಚಿಸಿರುವಂತೆ ಮುಂದಿನ ಒಟ್ಟು ಬಡ್ಡಿ ಜೊಗೂ ಇಂದಿನಿಂದ ಸೆಲ್ಲಿ, ಸದರಿ ನೋಟೀಸ್ ತಲುಪಿದ ದಿನಾಂಕದಿ